ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ
ದಿನಾಂಕ : DATE : 18/03/2019

### ಮೊದಲ ಸಾರಥಿಯಾಗಿ ನ್ಯಾಯಮೂರ್ತಿ ಘೋಷ್ ನೇಮಕ

# ಲೋಕಪಾಲ ಪ್ರತಿಷ್ಠಾಪನೆ

- ಸುಪ್ರೀಂ ನಿರ್ದೇಶನ ಪಾಲಿಸಿದ ಕೇಂದ್ರ
- ಎರಡು ದಿನದಲ್ಲಿ ಅಧಿಕೃತ ಘೋಷಣೆ
- ಏಳು ದಶಕದ ಬಳಿಕ ಅಂತಿಮ ಆಯ್ಕೆ
- ಒಂಬುಡ್ಸ್‌ಮನ್‌ಗೆ 8 ಸದಸ್ಯರ ನೇಮಕ

ನವದೆಹಲಿ: ದೇಶಕ್ಕೆ ಸ್ವಾತಂತ್ರ್ಯ ಬಂದು 7 ದಶಕಗಳ ಬಳಿಕ ಕೊನೆಗೂ ಲೋಕಪಾಲರ ಆಯ್ಕೆಗೆ ಕೇಂದ್ರ ಅಸ್ತು ಎಂದಿದೆ. ದೇಶದ ಮೊದಲ ಲೋಕಪಾಲರಾಗಿ ಸುಪ್ರೀಂಕೋರ್ಟ್ ಮಾಜಿ ನ್ಯಾಯಮೂರ್ತಿ ಪಿ.ಕೆ. ಘೋಷ್ ನೇಮಕವಾಗಿದ್ದಾರೆ.



ಹಿರಿಯ ನ್ಯಾಯಮೂರ್ತಿ ಪಿನಾಕಿ ಚಂದ್ರ ಘೋಷ್ ನೇಮಕವಾಗಿದ್ದು, ಅಧಿಕೃತ ಘೋಷಣೆಯಷ್ಟೇ ಬಾಕಿಯಿದೆ ಎಂದು ಕೇಂದ್ರ ಸರಕಾರದ ಮೂಲಗಳು ಮಾಹಿತಿ ನೀಡಿವೆ. ನ್ಯಾ.ಪಿ.ಸಿ.ಘೋಷ್ ನೇಮಕ ಕುರಿತು ಮುಂದಿನ ವಾರ ಅಧಿಕೃತ ಘೋಷಣೆ ಹೊರಬೀಳಲಿದೆ ಎಂದು ತಿಳಿದುಬಂದಿದೆ.

ಮಾರ್ಚ್ 15, ರಂದು ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಪಿ.ಸಿ.ಘೋಷ್ ಹೆಸರು ಲೋಕಪಾಲ ಹುದ್ದೆಗೆ ಅಂತಿಮಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್, ಲೋಕಸಭಾ ಸ್ಪೀಕರ್ ಸುಮಿತ್ರಾ ಮಹಾಜನ್ ಹಾಗೂ ಮುಕುಲ್ ರೋಹ್ಟಗಿ ಈ ಸಭೆಯಲ್ಲಿ ಭಾಗಿಯಾಗಿದ್ದರು.

ದೇಶದ ಮೊದಲ ಲೋಕಪಾಲ ಬಗ್ಗೆ ಅಧಿಕೃತ ಘೋಷಣೆ ಜತೆಗೆ, ರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ಒಂಬುಡ್ಸ್‌ಮನ್‌ಗೆ 8 ಸದಸ್ಯರ ನೇಮಕ ಸಹ ಮುಂದಿನ ವಾರ ನಡೆಯಲಿದೆ. ಲೋಕಪಾಲ ನೇಮಕ ಕುರಿತು ಸುಪ್ರೀಂಕೋರ್ಟ್‌ನಲ್ಲಿ ಇದೇ ತಿಂಗಳ ಅಂತ್ಯದಲ್ಲಿ ವಿಚಾರಣೆ ನಡೆಯಲಿದ್ದು, ಅಷ್ಟರೊಳಗೆ ನೇಮಕ ಕುರಿತು ಅಧಿಕೃತ ಘೋಷಣೆ ಹೊರಬೀಳಲಿದೆ ಎಂದು ಹೇಳಲಾಗಿದೆ.

ಪ್ರಸ್ತುತ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿರುವ ನ್ಯಾ.ಪಿ.ಸಿ.ಘೋಷ್, 4 ವರ್ಷಗಳ ಕಾಲ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ಬಳಿಕ ಮೇ 2017ರಂದು ಘೋಷ್ ನಿವೃತ್ತರಾಗಿದ್ದರು.

2014ರ ಆರಂಭದಲ್ಲೇ ಲೋಕಪಾಲ ಹಾಗೂ ಲೋಕಾಯುಕ್ತ ಕಾಯ್ದೆ ಜಾರಿಯಲ್ಲಿದ್ದರೂ, ಇದುವರೆಗೆ ಲೋಕಪಾಲರನ್ನಾಗಿ ಯಾರನ್ನೂ ಆಯ್ಕೆ ಮಾಡಿರಲಿಲ್ಲ. ಲೋಕಪಾಲ ನೇಮಕ ವಿಳಂಬಕ್ಕೆ ದೇಶದ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರ್ಕಾರವನ್ನು ಹಲವು ಬಾರಿ ತರಾಟೆಗೆ ತೆಗೆದುಕೊಂಡಿತ್ತು.

ಲೋಕಪಾಲ ನೇಮಕ ಕುರಿತ ಸಭೆಗೆ ಲೋಕಸಭೆ ಕಾಂಗ್ರೆಸ್ ಸಂಸದೀಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲಾಗಿತ್ತು. ಆದರೆ, ವಿಶೇಷ ಆಹ್ವಾನಿತರಿಗೆ ಮತ ಹಾಕಲು ಅಥವಾ ಲೋಕಪಾಲರನ್ನು ಆಯ್ಕೆ ಮಾಡಲು ಯಾವುದೇ ಅಧಿಕಾರವಿಲ್ಲದ ಕಾರಣ ಅವರು ಸತತ 6 ಸಭೆಗಳಿಗೆ ಗೈರುಹಾಜರಾಗಿದ್ದರು.

## ಪಿ.ಕೆ.ಘೋಷ್ ಯಾರು

ಮೂಲತಃ ಪಶ್ಚಿಮಬಂಗಾಳದವರಾದ ಪಿನಾಕಿ ಚಂದ್ರ ಘೋಷ್(66) ಮೇ.28, 1952ರಲ್ಲಿ ಕೊಲ್ಕತ್ತಾದಲ್ಲಿ ಜನಿಸಿದರು. ಐದು ತಲೆಮಾರುಗಳ ನ್ಯಾಯಾಂಗ ಹಿನ್ನೆಲೆಯ ಕುಟುಂಬದಿಂದ ಬಂದವರು. ಕೊಲ್ಕತ್ತಾ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದು ಬಳಿಕ ಆಂಧ್ರಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿಯೂ ಕೆಲಸ ಮಾಡಿದ್ದರು. ಇವರ ತಂದೆ ಸಂಬು ಚಂದ್ರ ಘೋಷ್ ಕೊಲ್ಕತ್ತಾ ಹೈಕೋರ್ಟ್ ಸಿಜೆ ಆಗಿ ಸೇವೆ ಸಲ್ಲಿಸಿದ್ದರು.